**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 313/2015**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 16**

**ದಿನಾಂಕಃ 02.04.2024** **ಸಿಡಬ್ಲ್ಯೂ 15**

| | |
|---|---|
| ಹೆಸರು | ಲಲಿತಮ್ಮ |
| ಗಂಡನ ಹೆಸರು | ಜೆ ತಿಪ್ಪೇಸ್ವಾಮಿ |
| ವಯಸ್ಸು | 46 ವರ್ಷ |
| ಉದ್ಯೋಗ | ಅಂಗನವಾಡಿ ಕಾರ್ಯಕರ್ತೆ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ. 6 ಮತ್ತು 7 ರವರ ಪರಿಚಯವಿದೆ. ಈಗ ನ್ಯಾಯಾಲಯದಲ್ಲಿ ನೋಡುತ್ತಿರುವ ಆರೋಪಿಯ ಪರಿಚಯ ಇದೆ. ಸನ್ 2010-11 ನೇ ಸಾಲಿನಲ್ಲಿ ನಾನು ಹಳ್ಳಿಹಾಳ ಅಂಗನವಾಡಿ ಬಿ ಕೇಂದ್ರದಲ್ಲಿ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತಿದ್ದಾಗ ಪ್ರತಿ ತಿಂಗಳ ಸೆಕ್ಟರ್ ಮೀಟಿಂಗ್ ನಡೆಯುತ್ತಿತ್ತು. ಸದರಿ ಒಂದು ಮೀಟಿಂಗ್‌ನಲ್ಲಿ ಆರೋಪಿ ಲಿಂಗರಾಜ ಮೈಕ್ರೋ ಇನ್ಸುರೆನ್ಸ್ ಮಾಡಿಕೊಡುತ್ತೇವೆ ಎಂದು ಹೇಳಿದರು. ನೀವು ಏಜೆಂಟರಾಗಿ ಕೆಲಸ ಮಾಡಿ ಎಂದು ಕೇಳಿಕೊಂಡರು. ಅದರಂತೆ ನಾವು ಏಜೆಂಟ್ ಆದೆನು. ಈ ಬಗ್ಗೆ ನನಗೆ ಒಂದು ಕೋಡ್ ಕೂಡಾ ಕೊಟ್ಟರು. ನನ್ನ ಕೋಡ್ ನಂಬರ್ 7 ಇತ್ತು . ಅದರಂತೆ ತಿಂಗಳಿಗೊಮ್ಮೆ, 3 ತಿಂಗಳಿಗೊಮ್ಮೆ ಹಾಗೂ 6 ತಿಂಗಳಿಗೊಮ್ಮೆ ಹಣ ಕಟ್ಟುವುದಾಗಿ ತಿಳಿಸಿದರು. ನಾವು ಪ್ರತಿ ತಿಂಗಳು ಕಟ್ಟಲು ಪ್ರಾರಂಭಿಸಿದೆವು. ಕಮೀಷನ್ ಕೂಡಾ ಕೊಡುತ್ತೇವೆ ಎಂದು ಹೇಳಿದರು. ಒಂದು ವೇಳೆ ಪಾಲಿಸಿ ಮಾಡಿಸಿ ತೀರಿಕೊಂಡರೆ ಪಾಲಿಸಿ ಹಣವನ್ನು ನೀಡುವುದಾಗಿ ಹೇಳಿದರು. ನಾನು 250-300 ಜನ ಪಾಲಿಸಿಯನ್ನು ಮಾಡಿಸಿದ್ದೆನು. ಸದರಿ ಪಾಲಿಸಿಗಳಿಂದ ಸುಮಾರು 4,66,000/- ರೂ. ಅಷ್ಟು ಹಣ ಆಗಿತ್ತು. ಸದರಿ ಹಣವನ್ನು ಹರಿಹರದ ಪ್ರಗತಿ ಗ್ರಾಮೀಣ ಬ್ಯಾಂಕ್ ಹಿಂಬಾಗದಲ್ಲಿದ್ದ ಆರೋಪಿ ಲಿಂಗರಾಜ ರವರ ಕಚೇರಿಗೆ ಕಟ್ಟಿದ್ದೆವು. ಆ ಬಗ್ಗೆ ನಮಗೆ ರಶೀದಿಗಳನ್ನು ಹಾಗೂ ಪಾಸ್ ಬುಕ್ ನಲ್ಲಿ ಎಂಟ್ರಿ ಮಾಡಿ ಕೊಡುತ್ತಿದ್ದರು. ಸದರಿ 4,66,000/- ರ ಪೈಕಿ 2,73,000/- ಹಣವನ್ನು ಶಿವಮೊಗ್ಗದ ಮುಖ್ಯ ಕಚೇರಿಗೆ ಕಟ್ಟಿರುತ್ತಾರೆ. ಇನ್ನುಳಿದ 1,93,000/- ಹಣವನ್ನು ಆರೋಪಿ ದುರುಪಯೋಗ ಪಡಿಸಿಕೂಂಡಿರುತ್ತಾರೆ. ಈ ಬಗ್ಗೆ ವಿಚಾರಿಸಲು ನಾವು ಶಿವಮೊಗ್ಗದ ಮುಖ್ಯ ಕಚೇರಿಗೆ ಹೋಗಿದ್ದೆವು. ಸದರಿ ಹಣ ದುರುಪಯೋಗ ಆದ ಬಗ್ಗೆ ನಮಗೆ ಕಚೇರಿಯ ಮುಖ್ಯಸ್ಥರು ತಿಳಿಸಿರುತ್ತಾರೆ. ಸದರಿ ವಿಚಾರ ತಿಳಿದ ನಂತರ ನಾವು ಶಿವಮೊಗ್ಗ ಕಚೇರಿಗೆ ಆರೋಪಿಯ ವಿರುದ್ಧ ದೂರು ನೀಡಿ ಬಂದೆವು. ಸದರಿ ದೂರನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ.22 ಎಂದು ಸಾಕ್ಷಿಯ ಸಹಿಯನ್ನು ನಿಪಿ.22(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ

ಪಾಲಿಸಿದಾರರ ಪಟ್ಟಿಯನ್ನು ನಿಪಿ.5 ಎಂದು ಗುರುತಿಸಲಾಯಿತು. ಈ ಬಗ್ಗೆ ಸಾಕ್ಷಿಯು ಪಾಲಿಸಿದಾರರ ಕೆಲವು ಪಾಸ್ ಬುಕ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.23 (ಒಟ್ಟು 48 ಪಾಸ್ ಬುಕ್ ಗಳು) ಎಂದು ಗುರುತಿಸಲಾಯಿತು. ನಂತರ ಶಿವಮೊಗ್ಗ ಕಚೇರಿಯ ವ್ಯವಸ್ಥಾಪಕರು ಆರೋಪಿ ವಿರುದ್ಧ ಹರಿಹರ ನಗರ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮಂಜೂರು ಮಾಡಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆಎಂಎಫ್‌ಸಿ, ಹರಿಹರ.